# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 550 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 11.12.2025 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಯಾವ ಮಾದರಿಯ ಎಷ್ಟು ಅಬಕಾರಿ (ಲೈಸೆನ್ಸ್‌ಗಳು) ಸನ್ನದುಗಳಿವೆ;(ಜಿಲ್ಲಾವಾರು ವಿವರ ಒದಗಿಸುವುದು) | ರಾಜ್ಯದಲ್ಲಿ ದಿನಾಂಕ:31-10-2025ರ ಅಂತ್ಯಕ್ಕೆ 14048 ಪರವಾನಿಗೆ ಪಡೆದ ವಿವಿಧ ರೀತಿಯ ಸನ್ನದುಗಳು ಕಾರ್ಯನಿರ್ವಹಿಸುತ್ತಿದ್ದು,ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ. | ಅಬಕಾರಿ ಲೈಸೆನ್ಸ್‌ಗಳನ್ನು ಆನ್‌ಲೈನ್ ಮೂಲಕ ಕೊಡುವ ಆಲೋಚನೆ ಸರ್ಕಾರದಲ್ಲಿಯೇ; ಇದ್ದರೆ,ಯಾವ ಕ್ರಮ ಕೈಗೊಳ್ಳಲಾಗಿದೆ: | ಅಬಕಾರಿ ಇಲಾಖೆಗೆ ಸಂಬಂಧಿಸಿದಂತೆ ಒಟ್ಟು 39 ಸೇವೆಗಳನ್ನು ಸಕಾಲ ಸೇವೆ ಅಡಿಯಲ್ಲಿ ತರಲಾಗಿರುತ್ತದೆ.<br><br>ಸನ್ನದು ನವೀಕರಣ/ಸನ್ನದು ಸ್ಥಳಾಂತರ/ಸನ್ನದು ಮಂಜೂರಾತಿ/ಸನ್ನದು ವರ್ಗಾವಣೆ ಸೇವೆಗಳನ್ನು 2018ನೇ ಸಾಲಿನಿಂದ ಆನ್‌ಲೈನ್ ಮೂಲಕ ಒದಗಿಸಲಾಗುತ್ತಿದೆ.<br><br>ಸದರಿ ಸೇವೆಗಳನ್ನು ಇನ್ನಷ್ಟು ಉನ್ನತಿಕರಣ ಮತ್ತು ಸರಳೀಕರಣಗೊಳಿಸುವ ಉದ್ದೇಶದಿಂದ Version-2 ಅನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಸದರಿ Version-2 ತಂತ್ರಾಂಶದ ಮೂಲಕ ಪ್ರಸ್ತುತ 2024-25 ನೇ ಸಾಲಿನಿಂದ ಸನ್ನದು ನವೀಕರಣವನ್ನು ಮತ್ತು ದಿನಾಂಕ:01-04-2025 ರಿಂದ ಸನ್ನದು ಮಂಜೂರಾತಿಯನ್ನು ಆನ್‌ಲೈನ್ ಮೂಲಕ ಮಾಡಲಾಗುತ್ತಿದೆ. |

| | | |
|---|---|---|
| | | ಪ್ರಸ್ತುತ ಎಲ್ಲಾ ಸನ್ನದುಗಳನ್ನು ಆನ್‌ಲೈನ್ ಮೂಲಕ ನವೀಕರಣ/ಮಂಜೂರಾತಿ ಮಾಡಲಾಗುತ್ತಿದೆ. |
| ಇ. | ರಾಜ್ಯದಲ್ಲಿ ವ್ಯಾಪಕವಾಗಿ ಅಕ್ರಮ ಮದ್ಯ ಮಾರಾಟ ಆಗಿರುವುದು ಸರ್ಕಾರದ ಗಮನದಲ್ಲಿದೆಯೇ; ಹಾಗಿದ್ದಲ್ಲಿ,ಇದನ್ನು ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ; | ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅನಧಿಕೃತ ಸ್ಥಳಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಪ್ರಕರಣಗಳು ಇಲಾಖೆಯ ಗಮನಕ್ಕೆ ಬಂದಿರುತ್ತದೆ.<br><br>ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟಲು ಅಬಕಾರಿ ಇಲಾಖೆಯಿಂದ ವಲಯ ವ್ಯಾಪ್ತಿಯ ರೂಟ್‌ಗಳಲ್ಲಿ ನಿರಂತರವಾಗಿ ಗಸ್ತು ನಡೆಸಲಾಗುತ್ತಿದೆ. ಸದರಿ ಗಸ್ತಿನ ಸಮಯದಲ್ಲಿ ಮತ್ತು ದೂರು ಸ್ವೀಕೃತವಾದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಸ್ಥಳಗಳ ಮೇಲೆ ದಾಳಿ ನಡೆಸಿ, ಅಕ್ರಮಗಳು ಕಂಡುಬಂದಲ್ಲಿ ಅಬಕಾರಿ ಕಾಯ್ದೆ ಮತ್ತು ನಿಯಮಗಳನುಸಾರ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ನಿಯಮಿತವಾಗಿ ರಸ್ತೆಗಾವಲು ನಡೆಸಿ ಸಂಶಯಾಸ್ಪದ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿ ಸಭೆಯನ್ನು ಏರ್ಪಡಿಸಿ ಸಮನ್ವಯ ಸಾಧಿಸಿ ಅಕ್ರಮ ಹತ್ತಿಕಲು ಕ್ರಮವಹಿಸುವ ಕುರಿತು ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಜಂಟಿ ಕಾರ್ಯಚರಣೆ ನಡೆಸಲಾಗುತ್ತಿದೆ. ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 50 ರಂತೆ ಕಾರ್ಯವ್ಯಾಪ್ತಿಯಲ್ಲಿ ನಡೆಯುವ ಅಬಕಾರಿ ಅಕ್ರಮಗಳ ಕುರಿತು ಮಾಹಿತಿ ನೀಡಲು ತಿಳುವಳಿಕೆ ಪತ್ರ ಜಾರಿಗೊಳಿಸಲಾಗಿರುತ್ತದೆ.<br><br>ಕಳೆದ ಮೂರು ವರ್ಷಗಳಲ್ಲಿ (2022-23, 2023-24 ಮತ್ತು 2024-25 ನೇ ಸಾಲಿನ ಜುಲೈ ರಿಂದ ಜೂನ್ ಮಾಹೆವರೆಗೆ) ಅಕ್ರಮ ಮದ್ಯ ಮಾರಾಟದ ವಿರುದ್ಧ ರಾಜ್ಯಾದ್ಯಂತ ಒಟ್ಟು 2,81,489 ದಾಳಿಗಳನ್ನು ನಡೆಸಿ, 14,992 ಜಾಮೀನಿಯವಲ್ಲದ (nonbailable) ಪ್ರಕರಣಗಳನ್ನು ಹಾಗೂ ಜಾಮಿನೀಯ ದಂಡ ವಿಧಿಸಬಹುದಾದ (bailable and compoundable) ಕಲಂ-15 ಎ ರ ಒಟ್ಟು |

| | | |
|---|---|---|
| | | 1,42,960 ಪ್ರಕರಣಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ ಅನ್ವಯ ದಾಖಲಿಸಲಾಗಿರುತ್ತದೆ. ಇದೇ ಅವಧಿಯಲ್ಲಿ 1,94,696 ಆರೋಪಿತರನ್ನು ದಸ್ತಗಿರಿಗೊಳಪಡಿಸಿ ಒಟ್ಟು 45.72 ಲಕ್ಷ ಲೀಟರ್ ಬಿಯರ್ ಮತ್ತು 23.28 ಲಕ್ಷ ಲೀಟರ್ ಮದ್ಯವನ್ನು ವಶಪಡಿಸಿಕೊಳ್ಳಲಾಗಿರುತ್ತದೆ. |
| ಈ. | ಹೊಸದಾಗಿ ಲೈಸೆನ್ಸ್‌ಗಳನ್ನು ನೀಡಲು ಸರ್ಕಾರ ತೆಗೆದುಕೊಂಡ ಕ್ರಮವೇನು? | ಪ್ರಸ್ತುತ ರಾಜ್ಯದಲ್ಲಿ ಸಿಎಲ್-4, ಸಿಎಲ್-6ಎ, ಸಿಎಲ್-7, ವೈನ್ ಟ್ಯಾವರ್ನ್,ವೈನ್ ಬೊಟೀಕ್, ಹೊಂದಿಕೊಂಡಂತೆ ಆರ್.ವಿ.ಬಿ ಮತ್ತು ಮೈಕ್ರೋಬ್ರೀವರಿ ಸನ್ನದುಗಳನ್ನು ಹೊಸದಾಗಿ ಮಂಜೂರು ಮಾಡಲಾಗುತ್ತಿದೆ.<br><br>2025 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಖಾಲಿ ಅಥವಾ ಲಭ್ಯವಿರುವ ಸನ್ನದುಗಳನ್ನು ಪಾರದರ್ಶಕ ಇ-ಹರಾಜಿನ ಮೂಲಕ ಹಂಚಿಕೆ ಮಾಡಲು ಪ್ರಸ್ತಾಪಿಸಿದ್ದು, ಅದರಂತೆ ಖಾಲಿ ಅಥವಾ ಲಭ್ಯವಿರುವ ಸನ್ನದುಗಳನ್ನು ಇ-ಹರಾಜು ಮಾಡಲು ಅಬಕಾರಿ ನಿಯಮಗಳಿಗೆ ಅಗತ್ಯವಿರುವ ತಿದ್ದುಪಡಿಗಳನ್ನು ಮಾಡಲಾಗಿರುತ್ತದೆ.<br><br>ಸನ್ನದುಗಳನ್ನು ಆನ್‌ಲೈನ್ ಮೂಲಕ ಇ-ಹರಾಜು ಮಾಡಲು ಕ್ರಮವಹಿಸಲಾಗುತ್ತಿದೆ. |

ಆಇ 96 ಇಎಲ್‌ಕ್ಯೂ 2025

(ಆರ್.ಬಿ.ತಿಮ್ಮಾಪುರ)
**ಅಬಕಾರಿ ಸಚಿವರು**

